# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 02

ಸದಸ್ಯರ ಹೆಸರು : ಶ್ರೀ ಹೆಚ್.ಎಂ. ರಮೇಶಗೌಡ

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 29.01.2021

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಪ್ರಸ್ತುತ ಸಾಲಿನಲ್ಲಿ ಕೋವಿಡ್ ಸಂಕಷ್ಟದ ಕಾರಣ ಸಾರಿಗೆ ಇಲಾಖೆ ನೌಕರರಿಗೆ ಈವರೆವಿಗೂ ವೇತನ ಪಾವತಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇಲಾಖೆಯ ನೌಕರರಿಗೆ ಶೀಘ್ರ ವೇತನ ಪಾವತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;</td><td>ಕೋವಿಡ್-19ರ ಸಂಕಷ್ಟದ ಕಾರಣ ನಾಲ್ಕೂ ಸಾರಿಗೆ ಸಂಸ್ಥೆಗಳಿಗೆ ಸಾರಿಗೆ ಆದಾಯದಲ್ಲಿ ಕೊರತೆ ಉಂಟಾಗಿದ್ದರಿಂದ, ಸಾರಿಗೆ ಸಂಸ್ಥೆಗಳ ಅಧಿಕಾರಿ/ನೌಕರರ ಏಪ್ರಿಲ್-2020ರ ಮಾಹೆಯಿಂದ ನವೆಂಬರ್-2020ರವರೆಗಿನ ವೇತನ ವೆಚ್ಚಕ್ಕಾಗಿ ಸರ್ಕಾರವು ಈ ಕೆಳಕಂಡಂತೆ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಿ, ವೇತನ ಪಾವತಿಸಲಾಗಿರುತ್ತದೆ:
<table>
<tr><th>ಸಂಸ್ಥೆಗಳು</th><th>ಮೊತ್ತ (ರೂ. ಕೋಟಿಗಳು)</th></tr>
<tr><td>ಕ.ರಾ.ರ.ಸಾ.ನಿಗಮ</td><td>563.55</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>519.86</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>369.41</td></tr>
<tr><td>ಈ.ಕ.ರ.ಸಾ.ಸಂಸ್ಥೆ</td><td>329.89</td></tr>
<tr><td>ಒಟ್ಟು</td><td>1782.71</td></tr>
</table></td></tr>
<tr><td>ಆ)</td><td>ಸಾರಿಗೆ ಇಲಾಖೆಯ ನೌಕರರಿಗೆ ಎಷ್ಟು ತಿಂಗಳಿನಿಂದ ವೇತನ ಪಾವತಿಯಾಗಿಲ್ಲ; ವೇತನ ಪಾವತಿಗೆ ಅಗತ್ಯವಿರುವ ಹಣವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)</td><td>ಸಾರಿಗೆ ಸಂಸ್ಥೆಗಳ ನೌಕರರಿಗೆ ಏಪ್ರಿಲ್-2020ರಿಂದ ನವೆಂಬರ್-2020 ರವರೆಗೆ ಪೂರ್ಣ ಪ್ರಮಾಣದ ವೇತನವನ್ನು ಪಾವತಿಸಲಾಗಿದೆ. ಡಿಸೆಂಬರ್-2020ರ ಮಾಹೆಯಲ್ಲಿ ಸಾರಿಗೆ ಆದಾಯದ ಕೊರತೆಯಿಂದಾಗಿ ಶೇ.50ರಷ್ಟು ವೇತನವನ್ನು ಪಾವತಿ ಮಾಡಲಾಗಿದೆ.<br><br>ನಾಲ್ಕೂ ಸಾರಿಗೆ ಸಂಸ್ಥೆಗಳಿಗೆ ವೇತನ ಪಾವತಿಗಾಗಿ ಪ್ರತಿ ಮಾಹೆಯಾನ ಅಗತ್ಯವಿರುವ ಮೊತ್ತದ ವಿವರ ಈ ಕೆಳಕಂಡಂತಿದೆ:
<table>
<tr><th>ಸಂಸ್ಥೆಗಳು</th><th>ಮೊತ್ತ (ರೂ. ಕೋಟಿಗಳು)</th></tr>
<tr><td>ಕ.ರಾ.ರ.ಸಾ.ನಿಗಮ</td><td>101.76</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>98.62</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>65.42</td></tr>
<tr><td>ಈ.ಕ.ರ.ಸಾ.ಸಂಸ್ಥೆ</td><td>58.20</td></tr>
<tr><td>ಒಟ್ಟು</td><td>324.00</td></tr>
</table></td></tr>
<tr><td>ಇ)</td><td>ರಾಜ್ಯದ ಯಾವ ವಿಭಾಗದ ಸಾರಿಗೆ ಸಂಸ್ಥೆ ಪ್ರಸಕ್ತ ಸಾಲಿನಲ್ಲಿ ನಷ್ಟದಲ್ಲಿದೆ; ಪ್ರಸಕ್ತ ಸಾಲಿನಲ್ಲಿ ಸಾರಿಗೆ ಇಲಾಖೆಯ ಆದಾಯದ ಗುರಿಯಲ್ಲಿ ಎಷ್ಟು ಪ್ರಗತಿ ಸಾಧಿಸಲಾಗಿದೆ; (ಅಂಕಿ ಅಂಶ ಸಹಿತ ಮಾಹಿತಿ ನೀಡುವುದು)</td><td>ನಾಲ್ಕೂ ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳು ಪ್ರಸಕ್ತ ಸಾಲಿನಲ್ಲಿ ನಷ್ಟದಲ್ಲಿರುತ್ತವೆ.<br><br>ಸಾರಿಗೆ ಆದಾಯದ ಗುರಿಯಲ್ಲಿ ಸಾಧಿಸಲಾದ ಪ್ರಗತಿಯನ್ನು ಅಂಕಿ ಅಂಶ ಸಹಿತ ಮಾಹಿತಿ ಈ ಕೆಳಕಂಡಂತಿದೆ:<br><br>(ರೂ. ಕೋಟಿಗಳಲ್ಲಿ)
<table>
<tr><th>ಸಂಸ್ಥೆಗಳು</th><th>ಸಾರಿಗೆ ಆದಾಯದ ಗುರಿ</th><th>ಗಳಿಸಲಾದ ಆದಾಯ</th><th>ಶೇ.ವಾರು ಸಾಧಿಸಲಾದ ಪ್ರಗತಿ</th></tr>
<tr><td>ಕ.ರಾ.ರ.ಸಾ.ನಿಗಮ</td><td>2837.34</td><td>868.13</td><td>30.6</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>1403.00</td><td>381.00</td><td>27.16</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>1523.57</td><td>479.55</td><td>31.5</td></tr>
<tr><td>ಈ.ಕ.ರ.ಸಾ.ಸಂಸ್ಥೆ</td><td>1256.06</td><td>516.48</td><td>41.12</td></tr>
</table></td></tr>
</table>

| | | |
|---|---|---|
| | | ಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ 2020-21ನೇ ಸಾಲಿನಲ್ಲಿ ರಾಜಸ್ವ ಸಂಗ್ರಹಣೆ ಗುರಿ ರೂ.7115.00 ಕೋಟಿಗಳಾಗಿದ್ದು, ಡಿಸೆಂಬರ್ 2020ರ ಅಂತ್ಯಕ್ಕೆ ಗುರಿ ರೂ.5336.13 ಕೋಟಿಗಳಿಗೆ ಎದುರಾಗಿ ರೂ.3615.21 ಕೋಟಿ ರಾಜಸ್ವ ಸಂಗ್ರಹಣೆ ಮಾಡಲಾಗಿದ್ದು, ಶೇ.67.75ರಷ್ಟು ಗುರಿ ಸಾಧಿಸಲಾಗಿದೆ. |
| ಈ) | ಸಾರಿಗೆ ಇಲಾಖೆಯ ಪ್ರಮುಖ ಸೇವೆಗಳಾದ ವಾಹನದ ಮಾಲೀಕತ್ವ ವರ್ಗಾವಣೆ, ಸರಕು ಸಾಗಾಣೆ ಪರವಾನಗಿ, ಫಿಟ್‌ನೆಸ್ ಪ್ರಮಾಣ ಪತ್ರ ನೀಡುವಿಕೆ, ಆನ್‌ಲೈನ್ ಪ್ರಕ್ರಿಯೆ ಜಾರಿಯಲ್ಲಿದೆಯೇ; | ವಾಹನದ ಮಾಲೀಕತ್ವ ವರ್ಗಾವಣೆ, ಸರಕು ಸಾಗಾಣೆ ಪರವಾನಗಿ ಮತ್ತು ಅರ್ಹತಾ (ಫಿಟ್‌ನೆಸ್) ಪ್ರಮಾಣಪತ್ರ ನೀಡುವಿಕೆ (ಸಾರಿಗೆ) ಸೇವೆಗಳನ್ನು ಆನ್‌ಲೈನ್ ಮೂಲಕ ನೀಡುವ ಬಗ್ಗೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. |
| ಉ) | ಜಾರಿಯಾಗಿದ್ದರೆ ಈ ಸೇವೆಗಳ ಆನ್-ಲೈನ್ ಅರ್ಜಿಗಳ ವಿಲೇವಾರಿ ಪ್ರಕ್ರಿಯೆ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆಯೇ? (ಮಾಹಿತಿ ನೀಡುವುದು) | ಸದರಿ ಆನ್‌ಲೈನ್ ಸೇವೆಗಳ ಆನ್‌ಲೈನ್ ಅರ್ಜಿಗಳ ವಿಲೇವಾರಿ ಪ್ರಕ್ರಿಯೆಯ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲಾಗುತ್ತಿದ್ದು, ಅದರ ಕಾರ್ಯಕ್ಷಮತೆಯನ್ನು ಆಧರಿಸಿ ಸದರಿ ಸೇವೆಗಳನ್ನು ಆನ್‌ಲೈನ್‌ಗೊಳಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು. |

ಸಂಖ್ಯೆ: ಟಿಡಿ 01 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯ ಮಂತ್ರಿಗಳು ಹಾಗೂ
ಸಾರಿಗೆ ಸಚಿವರು